ಅನುವಾದಕ್ಕೆ ಪಠ್ಯದ ಆಯ್ಕೆಯ ಕುರಿತು ಮಾತು ಬಂದಾಗ ತಾನು ಕನ್ನಡ ಸಾಹಿತ್ಯಕ್ಕೆ ಮತ್ತು ಕೊಂಕಣಿ ಸಾಹಿತ್ಯಕ್ಕೆ ಉತ್ತಮ ಹಾಗೂ ವಿಶಿಷ್ಟ ದೇಣಿಗೆಯಾಗಬಲ್ಲ ಕೃತಿಗಳನ್ನೇ ಆಯ್ದುಕೊಳ್ಳುತ್ತೇನೆ ಎಂದರು ಗೀತಾ ಶೆಣೈ, "ನನ್ನ ಅಭಿಪ್ರಾಯದಲ್ಲಿ ನಾನು ಕನ್ನಡಕ್ಕೆ ಅನುವಾದಿಸಿರುವ ಅರುಂಧತಿ ರಾಯ್ ಅವರ 'ಗಾಡ್ ಆಫ್ ಸ್ಮಾಲ್ ಥಿಂಗ್ಸ್' ಮತ್ತು ಧರ್ಮಾನಂದ ಕೊಸಾಂಬಿಯವರ 'ನಿವೇದನ' ಅನನ್ಯ ಕೃತಿಗಳು. ಕೊಂಕಣಿಯಿಂದ ಅನುವಾದಿಸುತ್ತಿರುವ ಗೋಕುಲದಾಸ್ ಪ್ರಭು, ಮೀನಾ ಕಾಕೊಡಕಾರ್ ಮತ್ತು ಮಹಾಬಳೇಶ್ವರ್ ಸೈಲ್ ಅವರ ಕಥಾಸಾಹಿತ್ಯ ಗೋವಾ ಮತ್ತು ಕರ್ನಾಟಕ ಗೋವಾ ಗಡಿಪ್ರದೇಶದ ಬಡ, ಅಸಹಾಯಕ ಸಮುದಾಯಗಳ ಕತೆಯನ್ನು, ಕೊಂಕಣಿ ಸಂಸ್ಕೃತಿಯನ್ನು ಬಿಂಬಿಸುವ ರೀತಿಯದ್ದಾಗಿವೆ. ಕರ್ನಾಟಕದಲ್ಲಿ ಹುಟ್ಟಿ ಬೆಳೆದು, ಕೊಂಕಣಿ ಭಾಷೆಯ ಬೆಳವಣಿಗೆಗಾಗಿ ಶ್ರಮಿಸಿದ ಬಸ್ತಿ ವಾಮನ ಶೆಣೈ ಅವರ ಆತ್ಮಕಥಾನಕವನ್ನು 'ಓರ್ವ ಭಿಕ್ಷುಕ ಚಕ್ರವರ್ತಿಯ ಕಥೆ'ಯ ರೂಪದಲ್ಲಿ ಕನ್ನಡಕ್ಕೆ ಅನುವಾದಿಸಿದಾಗ ಕಳೆದ ಐವತ್ತು ವರ್ಷಗಳಲ್ಲಿ ಕರ್ನಾಟಕದಲ್ಲಿ ಕೊಂಕಣಿ ಭಾಷೆ ಬೆಳೆದು ಬಂದ ದಾರಿಯ ಅವಲೋಕನದ ಚಿತ್ರಣವನ್ನೂ ನೀಡುತ್ತಿದ್ದೇನೆ ಎಂಬ ಅರಿವು ನನಗೆ ಉಂಟಾದದ್ದು ಈ ಅನುವಾದ ಕೃತಿಗೆ ಬಂದ ವಿಮರ್ಶೆಯ ನಂತರವೇ. ವಿವಿಧ ಸಂಸ್ಥೆಗಳ ಬಹುಭಾಷಾ ಅನುವಾದ ಯೋಜನೆಗಳಲ್ಲಿ ತೊಡಗಿಸಿಕೊಂಡು ಕರ್ನಾಟಕವೂ ಸೇರಿದಂತೆ ಅನ್ಯರಾಜ್ಯಗಳಲ್ಲಿರುವ ಕೊಂಕಣಿ ಭಾಷಿಕರಿಗೆ ಕನ್ನಡದ ವಚನ ಸಾಹಿತ್ಯ, ಕನಕದಾಸ ಸಾಹಿತ್ಯ ಮತ್ತು ಕುವೆಂಪು ವಿಚಾರ ಸಾಹಿತ್ಯವನ್ನು ಭಾಷಾಂತರದ ಮೂಲಕ ತಲುಪಿಸುವ ಕಾರ್ಯವನ್ನು ನಡೆಸಿದ್ದು ನನಗೆ ತೃಪ್ತಿ ನೀಡಿದೆ."

ಒಂದು ಭಾಷೆಯಲ್ಲಿ ಅತ್ಯಂತ ಯಶಸ್ವಿಯಾದ ಕೃತಿ ಮತ್ತೊಂದು ಭಾಷೆಗೆ ಅನುವಾದದ ಮೂಲಕ ಬಂದಾಗ ಅದೇ ರೀತಿಯ ಪ್ರತಿಕ್ರಿಯೆ, ಯಶಸ್ಸು ಯಾಕೆ ಪಡೆಯುವುದಿಲ್ಲ ಎನ್ನುವುದು ಗಂಗಾಧರನ್ ಸಮಸ್ಯೆ. ''ಗಲ್ಫ್ ರಾಷ್ಟ್ರದಲ್ಲಿದ್ದ ಒಬ್ಬ ವ್ಯಕ್ತಿಯ ಆತ್ಮಕಥಾನಕ ರೂಪದ ಮಲಯಾಳಂ ಕಾದಂಬರಿ ಪ್ರತಿಗಳು ಲಕ್ಷ ಸಂಖ್ಯೆಯಲ್ಲಿ ಮಾರಾಟವಾಗಿದ್ದರೆ ಅದೇ ಕಾದಂಬರಿ ಕನ್ನಡದಲ್ಲಿ ಬಂದಾಗ ಅದರ ಮುನ್ನೂರು ಪ್ರತಿಗಳು ಕೂಡ ಮಾರಾಟವಾಗುವುದಿಲ್ಲ ಯಾಕೆ? ಇನ್ನು 'ಗೌರಿ' ಸಂಕಲನದಲ್ಲಿ ಅಳವಡಿಸಲಾದ ಪದ್ಮನಾಭನ್ ಅವರ 'ಗೌರಿ' ಕಿರುಗತೆ ಕೇರಳಲ್ಲಿ ಬಹು ಚರ್ಚೆಗೆ ಒಳಗಾಗಿತ್ತು. ಆದರೆ ಕನ್ನಡಕ್ಕೆ ಬಂದಾಗ ಅದು ಯಾರ ಗಮನವನ್ನೂ ಸೆಳೆಯಲಿಲ್ಲ.'' ''ಗಲ್ಫ್ ರಾಷ್ಟ್ರದಲ್ಲಿರುವವನ ಸಮಸ್ಯೆ, ಹೋರಾಟ ಕೇರಳಕ್ಕೆ ಚಿರಪರಿಚಿತ, ಕರ್ನಾಟಕದಲ್ಲಿ ಕರಾವಳಿ ಪ್ರದೇಶವನ್ನು ಬಿಟ್ಟರೆ ಉಳಿದೆಡೆ ಅದು ಅಷ್ಟು ಪರಿಚಿತವಾಗಿರಲಿಕ್ಕಿಲ್ಲ. ಇನ್ನು ಭಾಷಾಂತರ ಕೃತಿಗಳಿಗೆ ಹೆಚ್ಚಿನ ಪ್ರಚಾರ ಸಿಗುವ ಅಗತ್ಯವೂ ಇದೆ...'' ಗೀತಾ ಶೆಣೈ ಮಾತು ಮುಗಿಸುವುದರೊಳಗೆ ಗಂಗಾಧರನ್, "ನಮ್ಮ ಸಾಹಿತ್ಯ ಸಮ್ಮೇಳನಗಳಲ್ಲಿ ಭಾಷಾಂತರ ಕುರಿತಾದ ಗೋಷ್ಠಿಗಳೇ ಇರುವುದಿಲ್ಲ"ವೆಂಬ ಬೇಸರ ವ್ಯಕ್ತಪಡಿಸಿದರು. "ಆದರೆ ನಾವು ಒಂದು ವಿಚಾರವನ್ನು ಗಮನದಲ್ಲಿಟ್ಟುಕೊಳ್ಳಬೇಕು, ಅದೇನೆಂದರೆ ಕರ್ನಾಟಕದಲ್ಲಿ, ಕನ್ನಡ ಭಾಷೆಯಲ್ಲಿ ಅನುವಾದಕ್ಕೆ ಸಿಗುತ್ತಿರುವ ಮನ್ನಣೆ, ಗೌರವ ಬೇರೆ ಯಾವುದೇ ರಾಜ್ಯಗಳಲ್ಲಿ, ಭಾಷೆಗಳಲ್ಲಿ ಕಾಣಸಿಗುವುದು ಅಪರೂಪ. ನಮ್ಮಲ್ಲಿ ಅನುವಾದಗಳನ್ನು ಪ್ರಕಟಿಸುವ, ಅನುವಾದ ಕೃತಿಗಳಿಗೆ ಪ್ರಶಸ್ತಿ ನೀಡುವ ಕುವೆಂಪು ಭಾಷಾ ಭಾರತಿ, ಕೇಂದ್ರ ಸಾಹಿತ್ಯ ಅಕಾಡೆಮಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಹಾಗೂ ಇತರ ಭಾಷಾ ಅಕಾಡೆಮಿಗಳು ಇವೆ. ಇಲ್ಲಿ ಎನ್‌ಬಿಟಿಯ ಪ್ರಾದೇಶಿಕ ಕಚೇರಿ ಇದೆ. ಕನ್ನಡ ವಿಶ್ವವಿದ್ಯಾಲಯದಲ್ಲಿ ಭಾಷಾಂತರ ಅಧ್ಯಯನ ವಿಭಾಗವಿದೆ. ಅವರು ಭಾಷಾಂತರಕಾರರ, ಭಾಷಾಂತರ ಕೃತಿಗಳ ಸೂಚಿ, ದತ್ತ ಕಣಜವನ್ನು ಪ್ರಾರಂಭಿಸಿದ್ದಾರೆ. ನವಕರ್ನಾಟಕ, ಬೆಳ್ಳಿಚುಕ್ಕಿ